ದಿ.17.02.2020. O S 76/2011 PW-1

ದಿ.17.02.2020 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು 5 ನೇ ಪ್ರತಿವಾದಿ ಪರ ಶ್ರೀ ಕೆ ಟಿ ಟಿ ವಕೀಲರಿಂದಃ-**

ನಿಪಿ-6 ನ್ನು ಚೆನ್ನೇಗೌಡ ಮತ್ತು ಅಂಕೇಗೌಡರ ಇಬ್ಬರ ಮಕ್ಕಳು ಸೇರಿ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಚೆನ್ನೇಗೌಡ ಮತ್ತು ಅಂಕೇಗೌಡ ಇಬ್ಬರಿಗೂ ಸರ್ವೆ ನಂಬರ್ 207 ರಲ್ಲಿ ತಲಾ 1/2 ಹಿಸ್ಸೆ ಜಮೀನು ವಿಬಾಗದಲ್ಲಿ ಹೋಗಿತ್ತು ಎಂದರೆ ಸರಿ. ನಿಪಿ-6 ರಲ್ಲಿ ಸರ್ವೆ ನಂಬರ್ 207 ರಲ್ಲಿ ಒಟ್ಟು ಅಳತೆ 6 ಎಕರೆ 1 ಗುಂಟೆ ತೋರಿಸಲಾಗಿದೆ ಎಂದರೆ ಸರಿ. 1942 ರಲ್ಲಿ ಸರ್ವೆ ನಂಬರ್ 207 ರಲ್ಲಿ ತಲಾ 1/2 ಭಾಗ ಹಿಸ್ಸೆಯನ್ನು ಮೇಲೆ ಹೇಳಿದಂತೆ ಇಬ್ಬರು ಮಾಡಿಕೊಂಡಿದ್ದರು ಎಂದರೆಸರಿ.

ನಿಪಿ-6 ರ ಸಮಯಕ್ಕೆ ನಿಪಿ-2 ರಿಂದ 4 ಆಗಿರಲಿಲ್ಲ ಎಂದರೆ ಸರಿಯಲ್ಲ. ನಿಪಿ-2 ರಿಂದ 4 ನ್ನು ಸಾಕ್ಷಿ ಗೆ ತೋರಿಸಿ ದಿನಾಂಕಗಳನ್ನು ಹೇಳಿ ನಿಪಿ-6 ರ ನಂತರ ನಿಪಿ-2 ರಿಂದ 4 ಆಗಿದೆ ಎಂದು ಪ್ರಶ್ನಿಸಲಾಗಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ನಿಪಿ-6 ರಲ್ಲಿ ಚನ್ನೇಗೌಡರ ಮಕ್ಕಳದ್ದು ಎಷ್ಟು ಜಮೀನು ಮತ್ತು ಅಂಕೇಗೌಡರ ಮಕ್ಕಳದ್ದು ಎಷ್ಟು ಜಮೀನು ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿ ಆ ರೀತಿ ಬರೆದಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂಬರ್ 207 ರಲಿಲ ಚನ್ನೇಗೌಡರ ಮಕ್ಕಳು ಏನದಾರೂ ಆಸ್ತಿಯನ್ನು ಪರಿವರ್ತನೆ (ವರ್ಗಾವರ್ಗಿ) ಮಾಡಿಕೊಂಡಿದ್ದಾರೆಯೇ ಎಂದರೆ ಸಾಕ್ಷಿ ಚನ್ನೇಗೌಡರ ಮಕ್ಕಳು ಮಾಡಿಕೊಡಂಡಿಲ್ಲ ಆದರೆ ಅಂಕೇಗೌಡರ ಮಕ್ಕಳು ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

ನಿಪಿ-6 ರ ಪ್ರಕಾರ ಅಂಕೇಗೌಡರ ಮಕ್ಕಳು ವರ್ಗಾವರ್ಗಿ ಮಾಡಿಕೊಂಡ ಎಷ್ಟು ಜಮೀನಿನಲ್ಲಿ ಅಸ್ಪತ್ರೆಗೆ ಜಮೀನನ್ನು ಕೊಟ್ಟಿದ್ದಾರೆ ಎಂದರೆ ಸಾಕ್ಷಿ ಎರಡು ಎಕರೆ ಎಂದು ನುಡಿಯುತ್ತಾರೆ. ಹಾಗಾದರೆ ಸರ್ವೆ ನಂಬರ್ 207 ರಲ್ಲಿ ಎಷ್ಟು ಜಮೀನನ್ನು ಅಂಕೇಗೌಡರ ಮಕ್ಕಳು ವರ್ಗಾವರ್ಗಿ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿ ಒಂದು ಎಕರೆ ಎಂದು ನುಡಿಯುತ್ತಾರೆ. ನಿಪಿ-6 ರಲ್ಲಿ ಎರಡು ಎಕರೆಯನ್ನು ಅಂಕೇಗೌಡರ ಮಕ್ಕಳು ಕೊಟ್ಟ ಬಗ್ಗೆ ನಮೂದು ಇದೆಯೇ ಎಂದರೆ ಸಾಕ್ಷಿ ನಿಪಿ-6 ರಲ್ಲಿ ನಮೂದು ಇರುವುದಿಲ್ಲ ಆದರೆ ವರ್ಗಾವರ್ಗಿ ದಾಖಲೆಯಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಹಾಗಾದರೆ ನಿಪಿ-2 ರಿಂದ 4 ರಲ್ಲಿ ಸರ್ವೆ ನಂಬರ್ 207 ರಲ್ಲಿ ಎಷ್ಟು ವಿಸ್ತೀರ್ಣ ಜಮೀನು ವರ್ಗಾವರ್ಗಿ ಅಗಿದೆ ಎಂದರೆ ಸಾಕ್ಷಿ ಒಂದು ಎಕರೆ ಎಂದು ನುಡಿಯುತ್ತಾರೆ. ನಿಪಿ-2 ರಿಂದ 4 ರಂತೆ ಒಟ್ಟು ಎರಡು ಎಕರೆ 15 ಗುಂಟೆ ಸರ್ವೆ ನಂಬರ್ 207 ರಲ್ಲಿ ವರ್ಗಾವರ್ಗಿ ಆಗಿರುತ್ತದೆ ಎಂದರೆ ಸರಿ.

ನಿಪಿ-6 ರನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಹಾಗಾದರೆ ಅದರಲ್ಲಿ ನಮೂದು ಇರುವ ಚೆಕ್ಕು ಬಂದಿ ಎನು ಎಂದರೇ ಸಾಕ್ಷಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಪುಟ್ಟೇಗೌಡರ ಮಕ್ಕಳ ಜಮೀನು ಮತ್ತು ಉಳಿಕೆ 207 ರ ಜಮೀನು, ಉತ್ತರಕ್ಕೆ ಕಾಡೇಗೌಡರ ಮಕ್ಕಳ ಜಮೀನು ಮತ್ತು ಕೆಂಪಮ್ಮನವರ ಮಕ್ಕಳ ಜಮೀನು, ಮತ್ತು ದಕ್ಷಿಣಕ್ಕೆ ಮೈಸೂರು ಬೆಂಗಳೂರು ರಸ್ತೆ ಇರುತ್ತದೆ. ಸರ್ವೆ ನಂಬರ್ 207 ರ ಜಮೀನು ಯಾರಿಗೆ ಸೇರಿದ್ದು ಎಂದರೆ ಸಾಕ್ಷಿ ಅಂಕೇಗೌಡ ಮತ್ತು ಚನ್ನೇಗೌಡ ಇಬ್ಬರ ಮಕ್ಕಳಿಗೂ ಸೇರಿದ ಜಮೀನು ಎಂದು ನುಡಿಯುತ್ತಾರೆ. ಚನ್ನೇಗೌಡರ ಮಕ್ಕಳಲ್ಲಿ ಯಾರಿಗೆ ಆ ಜಮೀನು ಸೇರಿದೆ ಎಂದರೆ ಸಾಕ್ಷಿ ಹಿರಿಯ ಮಗನಾದ ಚೆನ್ನಂಕೇಗೌಡರಿಗೆ ಎಂದು ನುಡಿಯುತ್ತಾರೆ. ನಿಪಿ-6 ರಲ್ಲಿ ಪಶ್ಚಿಮಕ್ಕೆ ಪುಟ್ಟೇಗೌಡರ ಮಕ್ಕಳು ಜಮೀನು ಎಂದು ಮಾತ್ರ ನಮೂದು ಆಗಿದೆ ಎಂದರೆ ಸರಿಯಲ್ಲ. ನಿಪಿ-6 ರಲ್ಲಿ ಸರ್ವೆ ನಂಬರ್ 207/1 ರ ಎಷ್ಟು ಜಮೀನು ಒಳಪಟ್ಟಿದೆ ಎಂದರೆ ಸಾಕ್ಷಿ ನಾಲ್ಕು

ಎಕರೆ ಜಮೀನು ಎಂದು ನುಡಿ ಯುತ್ತಾರೆ. ಹಾಗಾದರೆ ಅದರಲ್ಲಿ ಅಂಕೇಗೌಡರ ಹಿಸ್ಸೆಯ ಜಮೀನು ಎಷ್ಟು ಎಂದರೆ ಸಾಕ್ಷಿ ಎರಡು ಎಕರೆ ಎಂದು ನುಡಿಯುತ್ತಾರೆ. ಸರ್ವೆ ನಂಬರ್ 207/1 ರಲ್ಲಿ ಅಂಕೇಗೌಡರ ಮಕ್ಕಳ ಎರಡು ಎಕರೆ ಜಮೀನಿನ ಚೆಕ್ಕು ಬಂದಿ ಎನು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂಬರ್ 207/1 ರಲ್ಲಿ ಚನ್ನೇಗೌಡರ ಮಕ್ಕಳ ಎರಡು ಎಕರೆ ಜಮೀನಿನ ಚೆಕ್ಕು ಬಂದಿ ಎನು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಿಪಿ-6 ಆಗುವುದಕ್ಕಿಂತ ಮುಂಚೆಯೇ ಚೆನ್ನೇಗೌಡರ ಮತ್ತು ಅಂಕೇಗೌಡ ಮಕ್ಕಳು ವಿಬಾಗವಾಗಿ ಪ್ರತ್ಯೇಕವಾಗಿ ವಾಸವಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಚನ್ನೇಗೌಡರ ಮಕ್ಕಳು ಬಾಗ ಆಗಿದ್ದು ನನಗೆ ಗೊತ್ತಿಲ್ಲ ಅಂಕೇಗೌಡರ ಮಕ್ಕಳು ಭಾಗ ಆಗಿದ್ದರು ಎಂದು ನುಡಿಯುತ್ತಾರೆ.

ನಿಪಿ-6 ರಲ್ಲಿ ಅಂಕೇಗೌಡರ ಮಕ್ಕಳ ಇಷ್ಟಿಷ್ಟು ಜಮೀನು ಸೇರಿದೆ ಎಂದು ಪ್ರತ್ಯೇಕವಾಗಿ ನಮೂದು ಮಾಡಿದ್ದಾರೆಯೇ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಪಿ-2 ರಿಂದ 4 ರಲ್ಲಿ ಅಂಕೇಗೌಡರ ಮಕ್ಕಳು ತಮ್ಮಗಳ ಹಿಸ್ಸೆಯನ್ನು ಪ್ರತ್ಯೇಕವಾಗಿ ಅದಲು ಬದಲು ಮಾಡಿಕೊಂಡಿದ್ದಾರೆಯೇ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ನಿಪಿ-6 ನ್ನು ಬರೆದುಕೊಟ್ಟ ನಂತರ ಅದರ ಪಕ್ಷಗಾರರಲ್ಲಿ ನಿಪಿ-6 ರ ಜಮೀನಿಗೆ ಸಂಬಂದಿಸಿದಂತೆ ಯಾವುದಾದರೂ ತಕರಾರು ಬಂದಿತ್ತೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾರ ನಿಪಿ-6 ರ ನಂತರ ಒಂದು ಎಕರೆ ಉಳಿದ ಬಗ್ಗೆ ಹೇಳಿದ್ದು ಅದು ನಿಪಿ-6 ರಲ್ಲಿ ನಮೂದು ಇದೆಯೇ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಪಿ-6 ಅದ ನಂತರ ಒಂದು ಎಕರೆ ಉಳಿದಿರುವ ಬಗ್ಗೆ ಯಾವುದಾದರು ದಾಖಲೆಯನ್ನು ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿ ದಾಖಲೆ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ಹಾಗಾದರೆ ನಿಮ್ಮ ದಾಖಲೆಗಳಲ್ಲಿ ಅದು ಯಾವ ದಾಖಲೆ ಎಂದರೆ ಸಾಕ್ಷಿ

ನನಗೆ ಅಕ್ಷರ ಅರ್ಥವಾಗದ ಕಾರಣ ಈಗ ಹೇಳಲು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ. ಹಾಗಾದರೆ ಒಂದು ಎಕರೆ ಉಳಿದಿರುವ ಬಗ್ಗೆ ರೆವಿನ್ಯೂ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಮ್ಯುಟೇಷನ್ ಹಾಜರುಪಡಿಸಿರುತ್ತೇನೆ ಅದು ಯಾವುದು ಎಂದು ನನಗೆ ದಾಖಲೆಗಳಲ್ಲಿ ಗೊತ್ತಾಗುತ್ತಿಲ್ಲ ಎಂದು ನುಡಿಯುತ್ತಾರೆ. ಆ ರೀತಿಯ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ನೀವು ಹೇಳಿದ ಒಂದು ಎಕರೆ ಜಮೀನು ಅಂಕೇಗೌಡರ ಎಷ್ಟು ಮಕ್ಕಳ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿ ನಾಲ್ಕು ಜನ ಮಕ್ಕಳ ಹೆಸರಿನಲ್ಲಿ ಇದೆ ಎಂದು ನುಡಿಯುತ್ತಾರೆ. ನೀವು ಹೇಳುತ್ತಿರುವ ಮ್ಯುಟೇಷನ್ ನಾಲ್ಕು ಜನ ಮಕ್ಕಳ ಹೆಸರಿಗೆ ಸಂಬಂಧಿಸಿದ್ದೆ ಎಂದರೆ ಸಾಕ್ಷಿ ಅವರಿಗೆ ಸಂಬಂಧಿಸಿದ್ದಾಗಿದ್ದು ಒಬ್ಬರ ಹೆಸರಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ನಿಪಿ-5 ನನಗೆ ಸರಿಯಾಗಿ ಕಾಣುತ್ತಿಲ್ಲ. ಒಂದು ಎಕರೆ ಜಮೀನಿಗೆ ಸಂಬಂಧಿಸಿದಂತೆ ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಎನು ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು).**

**ಓ ಹೇ ಕೇ ಸ ಓ**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ. ಎಂ.ಎಫ್.ಸಿ ಚನ್ನಪಟ್ಟಣ.**